ವಾರದ ಪತ್ರ

## ವಾಹಿನಿಗಳು ಮತ್ತು ಕನ್ನಡ

ಕಸ್ತೂರಿ ಕನ್ನಡದ ಆಡು ಭಾಷೆಗೂ, ಲಿಖಿತ ಭಾಷೆಗೂ ಅಜಗಜಾಂತರವೆಂದರೆ ತಪ್ಪಾಗಲಾರದು. ಆದರೆ ಎಲ್ಲಾ ವಾಹಿನಿಗಳಲ್ಲೂ ಲಿಖಿತ ಭಾಷೆ ಮತ್ತು ಆಡುವ ಭಾಷೆ ಎರಡೂ ಒಂದೇ ಎಂದು ತಿಳಿದಿರುವಂತಿದೆ. ಇದರಿಂದ ವಾಹಿನಿಗಳಲ್ಲಿ ಕನ್ನಡ ವ್ಯಾಕರಣ ದೋಷಗಳೂ ಹೆಚ್ಚುತ್ತಿವೆ. ಉದಾ: ಗಿರ್ಜಾ, ಹೆಸ್ರಲ್ಲೇನಿದೆ, ಮದ್ವೆಗೆ, ಯಾರಿಲ್ವಾ? ಇತ್ಯಾದಿ ಪದ ಪ್ರಯೋಗಗಳು. ಬರೆಯುವಾಗ ವಿಸ್ತರಿಸಿ ಬರೆಯಬೇಕು. ಉದಾ: ಗಿರಿಜಾ, ಹೆಸರಲ್ಲೇನಿದೆ? ಮದುವೆಗೆ, ಯಾರೂ ಇಲ್ಲವಾ/ ಇಲ್ಲವೇ ಎಂದಾಗಬೇಕು. ಮುಂದೆ ಈ ಲೋಪದೋಷಗಳಿಂದ ಕನ್ನಡದ ಕೆಲವು ಪದಗಳೇ ಅಥವಾ ಅಕ್ಷರಗಳೇ ಮಾಯವಾಗಬಹುದು. ಸಂಬಂಧಪಟ್ಟವರು ಆಡುಭಾಷೆಗೂ, ಲಿಖಿತ ಭಾಷೆಗೂ ವ್ಯತ್ಯಾಸ ತಿಳಿದು ಕನ್ನಡವನ್ನು ಸರಿಯಾಗಿ ಉಪಯೋಗಿಸಿದರೆ ಕನ್ನಡ ಭಾಷೆ ಮತ್ತು ವ್ಯಾಕರಣ ಎರಡೂ ಉಳಿಯುತ್ತದೆ.

—ಶಾಂತಾ ನಾಗರಾಜ್ ಕೆ., ಬೆಂಗಳೂರು

## ಚಂದದ 'ಶುಭೋದಯ'

'ಚಂದನ' ವಾಹಿನಿಯಲ್ಲಿ ಪ್ರಸಾರವಾಗುವ 'ಶುಭೋದಯ ಕರ್ನಾಟಕ' ಕಾರ್ಯಕ್ರಮ ತನ್ನ 200 ಕಂತುಗಳನ್ನು ಪೂರೈಸಿ ತ್ರಿಶತಕದತ್ತ ಹೆಜ್ಜೆ ಇಡುವ ಸಂದರ್ಭದಲ್ಲಿ ನಾಡಿನ ಖ್ಯಾತ ಸಾಹಿತಿ ಡಾ. ವೈದೇಹಿ ಅವರೊಡನೆ ಸಂದರ್ಶನ ಪ್ರಸಾರ ಮಾಡಲಾಯಿತು. ಕಥೆಗಾರರಾಗಿ, ಪ್ರಬಂಧಕಾರರಾಗಿ, ಪತ್ರಿಕೆಗಳಿಗೆ ಅಂಕಣಕಾರರಾಗಿ ಪ್ರಸಿದ್ಧಿ ಪಡೆದ ಅವರು ತಮ್ಮ ಸಾಹಿತ್ಯ ಲೋಕಕ್ಕೆ ಪಾದಾರ್ಪಣೆ ಮಾಡಿದ ರೀತಿ, ಬದುಕು ಕಲಿಸಿದ ಪಾಠಗಳು, ಅವುಗಳಿಂದ ಪಡೆದ ಜೀವನಾನುಭವದ ಬಗ್ಗೆ ವಿವರಣೆ ನೀಡಿದರು. ಅಂತರಾಳದಲ್ಲಿ ಇರುವ ಅನುಭವ ಅಕ್ಷರದಲ್ಲಿ ತಂದಿಡುವ ಕೆಲಸ ಮಾಡಿ ಬಿಡುತ್ತದೆ. ಅದು ಕಥೆಯ ರೂಪದಲ್ಲಿರಬಹುದು. ಗದ್ಯ ಲೇಖನದಲ್ಲಿಬಹುದು ಎಂದು ತಮ್ಮ ಸಾಹಿತ್ಯದ ಕೃಷಿ ಅನುಭವದ ಕುರಿತು ವಿವರವಾಗಿ ವಿವರಿಸಿದರು.

ಕನ್ನಡ ಸಾಹಿತ್ಯವನ್ನು, ನಾಡು ನುಡಿಯನ್ನು, ಹಿರಿಯರನ್ನು ನವ ಪೀಳಿಗೆಗೆ ಪರಿಚಯಿಸುವ ಇಂತಹ ಇನ್ನಷ್ಟು ಕಾರ್ಯಕ್ರಮಗಳು ಕನ್ನಡ ವಾಹಿನಿಗಳಲ್ಲಿ ಬರಲಿ ಎಂದು ಆಶಿಸೋಣ.

—ಮೀನಾಕ್ಷಿ ಕೆ. ರಾಮಗುಂಡಿ, ಬೈಲಹೊಂಗಲ

## ಹೊಸತನ ಇಲ್ಲದ 'ಜೋಡಿ ಹಕ್ಕಿ'

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಜೋಡಿ ಹಕ್ಕಿ' ಧಾರಾವಾಹಿಯಲ್ಲಿ ಯಾವುದೇ ಹೊಸತನ ಉಳಿದಿಲ್ಲ. ನಂದಿತಾಳ ಕಪಟತನದ ಅರಿವೇ ಆಗದ ರಾಮನ ಮಂಕುತನ ಹರಿಯದೆ ಧಾರಾವಾಹಿ ನಿಂತ ನೀರಂತೆ ಆಗಿದೆ. ನಿರ್ದೇಶಕರು ವೀಕ್ಷಕರನ್ನು ಸಹ ಮಂಕುಗಳು ಎಂದುಕೊಂಡು ಕಥೆಯನ್ನು ರಾಮನ ಮುಗ್ಧತನದಲ್ಲೇ ಮುಳುಗಿಸಿ ತೇಲಿಸುತ್ತಿದ್ದಾರೆ.

—ಎಸ್. ವಿಜಯಕುಮಾರಿ, ಬೆಂಗಳೂರು

## ಕಾಲಹರಣದ 'ಬಿಗ್ ಬಾಸ್'

ನಾನು ಕಳೆದ 3–4 ವರ್ಷಗಳಿಂದ 'ಬಿಗ್ ಬಾಸ್' ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದೇನೆ. ಪ್ರತಿ ವರ್ಷವೂ ಈ ಕಾರ್ಯಕ್ರಮದಲ್ಲಿ ಜೀವನಮೌಲ್ಯಗಳು, ಹಾಸ್ಯ, ವೈಯಕ್ತಿಕ ಪ್ರತಿಭೆಗಳು ಬೆಳಕಿಗೆ ಬರುತ್ತಿದ್ದವು. ಆದರೆ ಈ ಸಾರಿ ಇದಾವುದೂ ಇಲ್ಲದೆ 'ಬಿಗ್ ಬಾಸ್' ನೋಡಲು ನೀರಸವಾದ ಕಾರ್ಯಕ್ರಮವಾಗಿದೆ. ಇದಕ್ಕೆ ಮುಖ್ಯ ಕಾರಣ ಈ ಸಾರಿಯ ಬಿಗ್‌ಬಾಸ್‌ನಲ್ಲಿ ಭಾಗಿಗಳಾಗಿರುವ ಮನೆಯ ಸದಸ್ಯರು. ಒಬ್ಬಿಬ್ಬರ ಹೊರತಾಗಿ ಉಳಿದ ಸದಸ್ಯರು ಕಾಲಹರಣಕ್ಕಾಗಿ 'ಬಿಗ್ ಬಾಸ್'ಗೆ ಬಂದಿದ್ದಾರೇನೋ ಎಂದು ಭಾಸವಾಗುತ್ತದೆ.

—ತೋಟದೂರು ಸೀತಾರಾಮ ಹೆಬ್ಬಾರ್, ಬೆಂಗಳೂರು

## ನಿರಾಸೆ ತಂದ ಧಾರಾವಾಹಿ

ಇತ್ತೀಚೆಗೆ ಆರಂಭವಾಗಿದ್ದ 'ಮಾಯಾ' ಧಾರಾವಾಹಿಯನ್ನು ಕೆಲವೇ ಕಂತುಗಳಲ್ಲಿ ಮುಗಿಸಿದ್ದು, ಕುತೂಹಲಕರ ಧಾರಾವಾಹಿಯಾಗಿತ್ತು. ಅರವಿಂದ ಮತ್ತು ದರ್ಶಿನಿಗೆ ಹುಟ್ಟುವ ಮಗುವಿನಿಂದ ಬೀಜಮೂಲ ಮಂತ್ರದ ರಹಸ್ಯ ತಿಳಿಯುತ್ತದೆ ಎಂದು ಆರಂಭದಲ್ಲಿ ಹೇಳುತ್ತಿದ್ದರೂ ಅದನ್ನು ತಿಳಿಸದೆ ಮುಗಿಸಿದ್ದು ನಿರಾಸೆಯಾಯಿತು.

—ರತ್ನ ಅಶೋಕ ಗೊರವರ, ಧಾರವಾಡ

## ಮಧುರ ಮಾತು

ಝೀ ಕನ್ನಡ ವಾಹಿನಿಯಲ್ಲಿ ಕಳೆದ 15ರಂದು ಪ್ರಸಾರವಾದ 'ಡ್ರಾಮಾ ಜೂನಿಯರ್ಸ್'ನ ಕಂತಿನಲ್ಲಿ ಪದ್ಮಶ್ರೀ ಪ್ರಶಸ್ತಿ ವಿಜೇತ ಇಬ್ರಾಹಿಂ ಸುತಾರ ಅವರು ಮಾತಾಡಿದರು. ಅವರ ಮಾತು ಸ್ವಚ್ಛ ಕನ್ನಡದಲ್ಲಿದ್ದು, ಅಧ್ಯಾತ್ಮದ ಮಾತುಗಳನ್ನು ಕೇಳಿ ಬಹಳ ಖುಷಿಯಾಯಿತು.

—ಶರ್ಮಿಷ್ಠಾ ವೇದಗರ್ಭ, ಬೆಂಗಳೂರು

## ವೀಕ್ಷಕರ ಸಹನೆಗೆ ಮಿತಿ ಇಲ್ಲವೇ!

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿ 'ರಾಧಾರಮಣ' ವೀಕ್ಷಕರ ಸಹನೆ ಕೆರಳಿಸುತ್ತಿದೆ ಎಂದರೆ ತಪ್ಪಲ್ಲ. ಮನೆಯಲ್ಲಿರುವ ಗಂಡಸು ಗಂಡು ಕುಲಕ್ಕೆ ಅವಮಾನ ಅನ್ನುವ ರೀತಿ ವರ್ತಿಸುತ್ತಾನೆ. ಇನ್ನು ಕತೆಯ ಖಳನಾಯಕಿ. ತನ್ನ ಸ್ವಂತ ಮಗಳಿಗೆ ಕೇಡು ಬಯಸುವವಳು ಅನ್ಯರ ಮಗಳಿಗೆ ಕೇಡು ಬಯಸದೆ ಇರುತ್ತಾಳೆಯೇ? ರಾಧಾ ಅವನಿ ಮತ್ತು ಮಾದನ ಬಗ್ಗೆ ಹಲವಾರು ಸಲ ಹೇಳಿದರೂ ನಂಬದ ರಮಣ ರಾಧಾಳನ್ನು ಅವಹೇಳನ ಮಾಡಿದಾಗ ಪ್ರತಿಭಟಿಸುವ ಹಕ್ಕು ರಾಧಾಳಿಗೆ ಇಲ್ಲವೇ ಅಥವಾ ಅವಳಿಗೆ ಸ್ವಾಭಿಮಾನವೇ ಇಲ್ಲವೇ ಎಂದು ಸಂದೇಹವಾಗುತ್ತದೆ. ಮನೆಯ ಯಜಮಾನ ಸತ್ಯ ಹೇಳದೆ, ಮನೆಯವರಿಗೆ ಅವನಿ ಬಗ್ಗೆ ನಿಜ ತಿಳಿಯದೆ, ರಮಣ ರಾಧಾಳ ಬಗ್ಗೆ ನಂಬದೆ, ಖಳನಾಯಕಿ ತನ್ನ ನೀಚ ಬುದ್ಧಿ ಬಿಡದೆ, ಖಳನಾಯಕಿಯ ಮಗಳಿಗೆ ರಮಣ ಸಿಗುವುದಿಲ್ಲ ಎಂಬ ಭ್ರಮೆ ಹೋಗದೆ ಎಷ್ಟು ವರ್ಷಗಳ ಕಾಲ ಈ ಧಾರಾವಾಹಿ ಯನ್ನು ವೀಕ್ಷಕ ಸಹಿಸಬೇಕು! ತಾಳ್ಮೆಗೂ ಒಂದು ಮಿತಿ ಇರುತ್ತದೆ ಅಲ್ಲವೇ ?

– ಎನ್.ಎಸ್.ಚಂದ್ರಶೇಖರ್, ಬೆಂಗಳೂರು

## ಮುಗ್ಧ ಮನಸ್ಸಿಗೆ ನೋವು ಮಾಡದಿರಿ..

ಟಿ.ವಿ. ಧಾರಾವಾಹಿಗಳಲ್ಲಿ ಪುಟ್ಟ ಮಕ್ಕಳನ್ನು ಹಿಂಸಿಸುವ, ಅಪಹರಿಸುವ, ಅವಾಚ್ಯವಾಗಿ ನಿಂದಿಸುವ, ಹೊಡೆಯುವ ದೃಶ್ಯಗಳಿಗೆ ಕಡಿವಾಣ ಬಿದ್ದರೆ ಒಳ್ಳೆಯದು. ಧಾರಾವಾಹಿ ಎಂದರೆ ಅದರಲ್ಲಿ ಒಂದೋ ಎರಡೋ ಮಕ್ಕಳಿರಬೇಕು; ತಿಂಗಳಿಗೊಮ್ಮೆ ಅವರ ಅಪಹರಣವಾಗುತ್ತಿರಬೇಕು ಎನ್ನುವಷ್ಟರ ಮಟ್ಟಿಗೆ ಇಂತಹ ವಿಷಯಗಳಿಗೆ ಒತ್ತು ನೀಡುತ್ತಿವೆ. ಅಷ್ಟೇ ಅಲ್ಲದೆ ರಿಯಾಲಿಟಿ ಶೋಗಳಲ್ಲಿ ಮಕ್ಕಳನ್ನು ವ್ಯಂಗ್ಯ ಮಾಡುವುದೂ ಅತಿಯಾಗುತ್ತಿದೆ ಎನಿಸುತ್ತದೆ. ಮಕ್ಕಳಿಗೂ ದೊಡ್ಡವರಂತೆ ತಮ್ಮದೇ ಆದ ವ್ಯಕ್ತಿತ್ವವಿದೆ. ತಮಾಷೆಗೂ ಆ ಮುಗ್ಧ ಮನಸ್ಸುಗಳಿಗೆ ನೋವಾಗದಂತೆ ಹಿರಿಯರು ಎಚ್ಚರ ವಹಿಸುವ ಅವಶ್ಯಕತೆಯಿದೆ. ಅದು ರೀಲ್ ಆಗಲೀ, ರಿಯಲ್ ಆಗಲೀ ಎಷ್ಟೇ ಸಲುಗೆಯಿದ್ದರೂ ಹಿರಿಯರನ್ನು ಗೌರವಿಸಿ ಮಾತನಾಡುವ ರೀತಿ ಮಕ್ಕಳ ಪಾತ್ರಗಳನ್ನು ಸೃಷ್ಟಿಸಲಿ.

– ಸೀಮಾ ಪೋನಡ್ಕ, ಪುತ್ತೂರು